KARNATAKA REGIONAL ORGANISATION FOR SOCIAL SERVICE
KROSS

# ಅಲೆಗಳು

ತ್ರೈ ಮಾಸಿಕ ಪತ್ರಿಕೆ

ಸಂಚಿಕೆ 34 ಖಾಸಗಿ ಪ್ರಸಾರಕ್ಕಾಗಿ ಏಪ್ರಿಲ್ - ಜೂನ್ 2016

## ಅರಣ್ಯ ಬೆಳೆಸಿ
## ಪರಿಸರ ಉಳಿಸಿ





ಮುಖ್ಯ ಸಂಪಾದಕರು
ಫಾ. ಸೆಬಾಸ್ಟಿಯನ್ ಫರ್ನಾಂಡಿಸ್

**ಒಳ ಪುಟಗಳಲ್ಲಿ :**

**ನಮ್ಮ ಪರಿಸರ**
ಶ್ರೀ ವರ್ಗೀಸ್ ಜಿ.ಎಂ.
ಮತ್ತು ಡಾ. ರಾಜಶೇಖರ್

**ಅಲೊವೆರ**
ಡಾ. ರಾಜಶೇಖರ್


**ಹೈದ್ರಾಬಾದ್ ಕರ್ನಾಟಕಕ್ಕೆ ವರದಾನವಾಗಲಿರುವ ಪರಿಚ್ಛೇದ 371 (ಜೆ)**

**ಕೈ ತೋಟ ಅಥವಾ ಹಿತ್ತಲ ತೋಟ ಒಂದು ಒಳನೋಟ**
ಶ್ರೀ ವರ್ಗೀಸ್ ಜಿ.ಎಂ.

**ವಾರ್ತಾ ವಿಶೇಷ**
ಶ್ರೀ ಕ್ಲೆಮೆಂಟ್ ಫರ್ನಾಂಡಿಸ್
ಮತ್ತು
ಶ್ರೀ ರಿಚರ್ಡ್ ಮಾರ್ಟಿಸ್

**ಮುಖಪುಟ ವಿನ್ಯಾಸ**
ಅನೂಷ ಗ್ರಾಫಿಕ್ಸ್

## ಓದುಗರೊಂದಿಗೆ ಕ್ಷಣ ಹೊತ್ತು......



ಜೂನ್ ತಿಂಗಳಲ್ಲಿ ವಿಶ್ವ ಪರಿಸರ ದಿನಾಚರಣೆಯನ್ನು ನಾವು ಸಡಗರ ಸಂಭ್ರಮಗಳಿಂದ ಆಚರಿಸಿ ಬಗೆ ಬಗೆಯ ಕಾರ್ಯಕ್ರಮಗಳನ್ನು ಹಾಕಿಕೊಂಡು ಗಿಡಗಳನ್ನು ನೆಡುವ ಮೂಲಕ ಅಥವಾ ಗಿಡಗಳನ್ನು ವಿತರಿಸುವ ಮೂಲಕ ಆಚರಿಸುವುದು ಸಾಮಾನ್ಯ. ಪರಿಸರ ಸಂರಕ್ಷಣೆಗೆ ಪ್ರತಿಜ್ಞೆ ತೊಟ್ಟು ಕುಟುಂಬದ ಹಂತದಿಂದಲೇ ಸಾಕಾರಗೊಳಿಸುವುದು ಅತ್ಯಂತ ಪ್ರಾಯೋಗಿಕ ವಿಧಾನ. ಪರಸರ ಸಂರಕ್ಷಣೆ ಅದು ನಮ್ಮ ದೈನಂದಿನ ಬದುಕಿನ ಭಾಗವಾಗಬೇಕು. ನಾವು ಪರಿಸರವನ್ನು ಸಂರಕ್ಷಿಸದಿದ್ದರೆ ಪರಿಸರ ಮನುಕುಲದ ಅಸ್ಥಿತ್ವವನ್ನು ಸರ್ವನಾಶ ಮಾಡುತ್ತದೆ.

ಕೇಂದ್ರ ಸರಕಾರ 2005ರಲ್ಲಿ ರೂಪಿಸಿ ಅನುಷ್ಠಾನಗೊಳಿಸಿದ ಮಹಾತ್ಮಾಗಾಂಧಿ ರಾಷ್ಟ್ರೀಯ ಉದ್ಯೋಗಖಾತ್ರಿ ಯೋಜನೆಯ ಸದ್ಬಳಕೆ ಮಾಡಿಕೊಂಡು ನಮ್ಮ ಸುತ್ತಮುತ್ತ ಅರಣ್ಯೀಕರಣಗೊಳಿಸಬೇಕು. ಇದಕ್ಕಾಗಿ ಒಂದು ನಿರ್ಧಿಷ್ಟ ಗುರಿಹೊಂದಿ ರೈತರ ಹೊಲದಲ್ಲಿ, ಗ್ರಾಮಗಳಲ್ಲಿ, ಶಾಲಾ-ಕಾಲೇಜು ಆವರಣದಲ್ಲಿ ಮತ್ತು ರಸ್ತೆ ಬದಿಗಳಲ್ಲಿ ಹೀಗೆ ವಿವಿಧೆಡೆ ಗಿಡಗಳನ್ನು ನೆಡುವಲ್ಲಿ, ಸಾಕಷ್ಟು ಸಿದ್ಧತೆಗಳನ್ನು ಕೈಗೊಳ್ಳಬೇಕಿದೆ. ಉದ್ಯೋಗಖಾತ್ರಿ ಯೋಜನೆಯಡಿ ರೈತರು ಗಿಡಗಳನ್ನು ತಮ್ಮ ಜಮೀನಿನಲ್ಲಿ, ಹೊಲದ ಬದುಗಳಲ್ಲಿ ಸಹ ನೆಡಲು ಅವಕಾಶವಿದೆ. ಈ ಯೋಜನೆಯಡಿ ಸರ್ಕಾರದ ವೆಚ್ಚದಲ್ಲಿ ರೈತರು ತಮ್ಮ ಹೊಲಗಳಲ್ಲಿ ತೋಟಗಾರಿಕೆ ಬೆಳೆ ಬೆಳೆಯಬಹುದಾಗಿದೆ. ವೈಯಕ್ತಿಕ ಫಲಾನುಭವಿಗಳಿಗೆ ಹೆಚ್ಚಿನ ಆದ್ಯತೆ ನೀಡಲು ನಿರ್ಧರಿಸಲಾಗಿದ್ದು, ಇದರಿಂದ ಗಿಡಗಳ ಸಮರ್ಪಕ ಪೋಷಣೆಯಾಗುವ ಭರವಸೆ ಇದೆ.

ಅರಣ್ಯೀಕರಣದಂತಹ ಮಹತ್ವದ ಯೋಜನೆ ಯಶಸ್ವಿಯಾಗಬೇಕಾದರೆ, ಕೇವಲ ಅರಣ್ಯ ಅಥವಾ ಇತರೆ ಇಲಾಖೆಗಳ ಪ್ರಯತ್ನದಿಂದ ಮಾತ್ರ ಸಾಧ್ಯವಾಗುವುದಿಲ್ಲ. ಇದರ ಯಶಸ್ವಿಗೆ ಸಾರ್ವಜನಿಕರು ಹಾಗೂ ಸಮುದಾಯದಲ್ಲಿನ ಪರಿಸರಾಸಕ್ತರು ಪರಿಸರದ ಬಗ್ಗೆ ಜಾಗೃತಿ ಹೊಂದಿ, ಅವರ ಸಕ್ರಿಯ ಪಾಲ್ಗೊಳ್ಳುವಿಕೆಯಿಂದ ಮಾತ್ರ ಸಾಧ್ಯವಾಗಬಹುದಾಗಿದೆ.

ಆಧುನಿಕ ಜಗತ್ತಿನ ಆವಿಷ್ಕಾರಗಳ ಐಷರಾಮಿ ಸುಖದ ಆಸೆ, ಆಕಾಂಕ್ಷೆಗಳ ಹಿಂದೆ ಮೂಲತಃ ವ್ಯಕ್ತಿಯ, ನಂತರ ಸಾಂಘಿಕ ರಚನೆಗಳಾದ ಸಮಾಜದ, ದೇಶದ ಪೈಪೋಟಿ ಇದೆ. ಮನುಷ್ಯ ಪ್ರಕೃತಿಯನ್ನು ತನಗಾಗಿ ರೂಪಾಂತರ ಮಾಡಿ ಬಳಕೆ ಮಾಡಿಕೊಳ್ಳುತ್ತಲೇ ಬಂದಿದ್ದಾನೆ. ಆದರೆ ಈಗ ಅದರ ಗತಿ ಹೆಚ್ಚಿದೆ. ಇಲ್ಲಿ ಒಂದು ಸ್ಪಷ್ಟ. ನಾವು ಇಂದು ಎದುರಿಸುತ್ತಿರುವ ವಾತಾವರಣ, ಪರಿಸರದ ಅಪಾಯದ ಸಮಸ್ಯೆಗಳ ಹಿಂದೆ ಭೂಮಿಯ ಸಂಪತ್ತನ್ನೆಲ್ಲಾ ದೋಚುವ ಮನುಷ್ಯನ ದುರಾಸೆಯ ಕೈವಾಡವಿದೆ. ಪಳಯುಳಿಕೆ ಇಂಧನ, ನದಿ ನೀರು, ಅಂತರ್ಜಲಗಳ ಮಿತಿಮೀರಿದ ದುಂದು ಬಳಕೆ, ನಮ್ಮ ಎದುರಿನ ಸತ್ಯ. ಪರಿಣಾಮಗಳನ್ನು ನಾವು ಈಗಾಗಲೇ ಎದುರಿಸಲಾರಂಭಿಸಿದ್ದೇವೆ. ಹಸಿರು ಮನೆ ಅನಿಲಗಳ ವಿಕಿರಣ ನಮಗೆ ಅಪಾಯದ ಸೂಚನೆ ನೀಡುತ್ತಿದೆ. ಪರಿಸರದ ದುಷ್ಪರಿಣಾಮಗಳಿಗೆ ಭೌಗೋಳಿಕ ಸೀಮೆ ಎಲ್ಲೆಗಳಿರುವುದಿಲ್ಲ.

ಭೂಮಿಯ ವಾಯುಗೋಳ, ಜಲಗೋಳ, ಜೀವಗೋಳಗಳ ಸಮತೋಲನ ಮನುಷ್ಯನ ಅಸ್ತಿತ್ವಕ್ಕೆ ಅನಿವಾರ್ಯ ಎಂಬ ಕೂಗು ಕೇಳಿಬರುತ್ತಿದೆ. ಅಭಿವೃದ್ಧಿಯ ನೆಪದಲ್ಲಿ ವಾತಾವರಣ ಮರೆಯಬಾರದು; ಪರಿಸರ ಸಂರಕ್ಷಣೆಯೊಂದಿಗಿನ ಅಭಿವೃದ್ಧಿಯೇ ಸುಸ್ಥಿರ ಅಭಿವೃದ್ಧಿ ಎನ್ನುವ ಪರಿಕಲ್ಪನೆ ಗಾಢವಾಗಬೇಕಿದೆ.

ಈ ಬಾರಿಯ ಪರಿಸರ ದಿನದ ಘೋಷಣಾ ವಾಖ್ಯ, "**ವನ್ಯ ಜೀವಿಗಳ ಬೇಟೆ ಮತ್ತು ಕಳ್ಳ ಸಾಗಣೆ ವಿರುದ್ಧ ಶೂನ್ಯ ಸೈರಣೆ**", ಇದಕ್ಕೆ ನಮ್ಮೆಲ್ಲರ ಸಹಮತವಿರಲಿ, ವನ್ಯ ಜೀವಿಗಳ ರಕ್ಷಣೆ ನಮ್ಮೆಲ್ಲರ ಹೊಣೆಯಾಗಿರಲಿ.

**ಫಾ. ಸೆಬಾಸ್ಟಿಯನ್ ಫರ್ನಾಂಡಿಸ್**
**ನಿರ್ದೇಶಕರು, ಕ್ರಾಸ್ ಸಂಸ್ಥೆ.**

ಅಲೆಗಳು

# ನಮ್ಮ ಪರಿಸರ

ಶ್ರೀ ವರ್ಗೀಸ್ .ಜಿ.ಎಂ ಮತ್ತು ಡಾ. ರಾಜಶೇಖರ್

ಪರಿಸರದ ಮೇಲೆ ಆಗಿಂದಾಗ್ಗೇ ಉಂಟಾಗುವ ವ್ಯತ್ಯಯ, ಏರುತ್ತಿರುವ ಜಾಗತಿಕ ತಾಪಮಾನ, ವಿವಿಧ ರೀತಿಯ ಮಾಲಿನ್ಯಗಳು, ಅವುಗಳಿಗೆ ಕಾರಣಗಳು ಮತ್ತು ನಿವಾರಣೋಪಾಯಗಳ ಬಗ್ಗೆ ಮಕ್ಕಳಿಗೆ ತಿಳಿವಳಿಕೆ ನೀಡಿ. ಮಳೆನೀರು ಸಂಗ್ರಹಣೆ, ಇಂಗುಗುಂಡಿ, ಪ್ಲಾಸ್ಟಿಕ್ ಬಳಕೆಯ ನಿಷೇಧ, ಇಂಥ ಹಲವು ವಿಚಾರಗಳ ಬಗ್ಗೆ ಮಕ್ಕಳೊಂದಿಗೆ ಚರ್ಚಿಸುವುದು ಅತ್ಯಗತ್ಯ. ಯಾಕೆಂದರೆ ಇಂದಿನ ಮಕ್ಕಳಲ್ಲಿ ಪರಿಸರದ ಬಗ್ಗೆ ಅರಿವಿನ ಕೊರತೆ ಎದ್ದು ಕಾಣುತ್ತಿದೆ. ಪೋಷಕರು ಮತ್ತು ಶಿಕ್ಷಕರಾಗಲೀ ಪರಿಸರ ಸಂರಕ್ಷಣೆಯ ಬಗ್ಗೆ ಅರಿವನ್ನು ಮೂಡಿಸುವಲ್ಲಿ ಹೆಚ್ಚಿನ ಪರಿಶ್ರಮ ತೆಗೆದುಕೊಳ್ಳಬೇಕಾಗಿದೆ. ಇಂದಿನ ಮಕ್ಕಳೇ ನಾಳಿನ ಪ್ರಜೆಗಳೆಂಬ ನಾಣ್ನುಡಿಯಂತೆ ಎಳೆಯ ಮನಸ್ಸು ಬಹಳ ಬೇಗ ಅಗತ್ಯತೆಯ ಬಗ್ಗೆ ಅತೀ ತೀಕ್ಷಣವಾಗಿ ಸ್ಪಂದಿಸುವ ವಯಸ್ಸಾಗಿರುತ್ತದೆ. ಜೊತೆಗೆ ಶಾಲಾ ಪರಿಸರದಲ್ಲಿ ಗಿಡಮರ ಬೆಳೆಸಿ ಹಸಿರಾಗಿಟ್ಟುಕೊಳ್ಳುವುದು, ನೀರನ್ನು ಪೋಲು ಮಾಡದೆ ಗಿಡಮರಗಳಿಗೆ ಬಳಸುವುದು, ವಿದ್ಯುತ್ ಪೋಲು ಮಾಡದಿರುವುದು, ಸಾರ್ವಜನಿಕ ವಾಹನಗಳ ಬಳಕೆ ಇಂಥ ವಿಚಾರಗಳ ಬಗ್ಗೆ ಮಕ್ಕಳಿಗೆ ಆಗಿಂದಾಗ್ಗೆ ಮಾಹಿತಿ ನೀಡಬೇಕು. ಪರಿಸರದ ಬಗ್ಗೆ ಗ್ರಂಥಾಲಯದ ಪುಸ್ತಕಗಳನ್ನು ಓದಿಸುವುದು, ಮಕ್ಕಳಲ್ಲೇ ಚರ್ಚೆ ಏರ್ಪಡಿಸಿ ಪರಿಸರ ಸಂರಕ್ಷಣೆಯ ಅಗತ್ಯವನ್ನು ಮನಗಾಣಿಸಬೇಕು.

ಪರಿಸರ ಎಂದರೆ ನಮ್ಮ ಸುತ್ತಾಮುತ್ತಲೂ ಇರುವ ವಸ್ತುಗಳು, ಪ್ರದೇಶ, ಪರಿಸ್ಥಿತಿ ಅಂತಯೇ ಎಲ್ಲ ಜಲಚರ, ವನಚರ, ಸಸ್ಯ ಸಂಕುಲ ಮತ್ತು ಜಡ ಪದಾರ್ಥಗಳನ್ನು ಒಳಗೊಂಡಿರುವುದು. ಮಾನವನೂ ಈ ಪರಿಸರದ ಅವಿಭಾಜ್ಯ ಅಂಗ. ಇದು ವಿಶ್ವ ವ್ಯಾಪಕವಾಗಿದ್ದು ವೈವಿಧ್ಯತೆಯಿಂದ ಕೂಡಿದೆ. ಮಾನವ ತನ್ನ ಐಷಾರಾಮಿ ಜೀವನಕ್ಕೋಸ್ಕರ ಪರಿಸರದ ಮೇಲೆ ದಿನೇ ದಿನೇ ಅತಿಕ್ರಮಣ ಮಾಡುತ್ತಲೇ ಇದ್ದಾನೆ. ಪ್ರತಿಯೊಂದು ಹಂತದಲ್ಲೂ ಪರಿಸರದ ಕಾಳಜಿಯನ್ನು ಮರೆತು ತನ್ನದೇ ಆದಂತಹ ಮತ್ತು ದೂರಾಲೋಚನೆಯಿಲ್ಲದ(ತನ್ನ ಮುಂದಿನ ಪೀಳಿಗೆಯ ಬಗ್ಗೆ ಚಿಂತಿಸದೆ) ಸ್ವಾರ್ಥ ಮನೋಬಾವದಿಂದ ಪರಿಸರದ ವಿನಾಶಕ್ಕೆ ತೊಡಗಿದ್ದಾನೆ. ಇದರ ಪರಿಣಾಮ ಮುದೊಂದು ದಿನ ನಾವು ಬಿಟ್ಟು ಹೋಗುವ ಪೀಳಿಗೆ ಅತ್ಯಂತ ಸಂಕಷ್ಟದಲ್ಲಿ ಸಿಲುಕಿ ನರಳುವ ದಿನಗಳು ಬಹಳ ದೂರವಿಲ್ಲ. ಉದಾ: ಪಂಚಭೂತಗಳಿಂದಾದ ನಮ್ಮ ಸೃಷ್ಟಿಯಲ್ಲಿ ಅತ್ಯಂತ ಅಮೂಲ್ಯಗಳಾದ ಗಾಳಿ, ನೀರು, ಭೂಮಿಗಳ ಮೇಲಾಗುತ್ತಿರುವ ಅನಿರ್ಭಂಧಿತ ಬಳಕೆ (ಅಭಿವೃದ್ಧಿಯ ಹೆಸರಿನಲ್ಲಿ) ನಡೆಯುತ್ತಿದೆ. ಜನಸಂಖ್ಯಾ ಸ್ಫೋಟವು ಒಂದು ಅಪಾಯಕಾರಿ ಸನ್ನಿವೇಶದತ್ತ ವೇಗವಾಗಿ ಸಾಗುತ್ತಿದೆ.

ಸಾಮಾನ್ಯವಾಗಿ ಪರಿಸರವನ್ನು ನಾಲ್ಕು ಪ್ರಕಾರಗಳಲ್ಲಿ ವರ್ಗೀಕರಿಸುತ್ತೇವೆ. ಅವುಗಳೆಂದರೆ:

- ಭೌತಿಕ ಪರಿಸರ
- ಜೈವಿಕ ಪರಿಸರ
- ಆರ್ಥಿಕ ಪರಿಸರ ಮತ್ತು
- ಸಾಮಾಜಿಕ ಪರಿಸರ

**ಭೌತಿಕ ಪರಿಸರ:**

ಇದನ್ನು ನೈಸರ್ಗಿಕ ಪರಿಸರ, ಭೌತಿಕ ಪರಿಸರ, ಬೌಗೋಲಿಕ ಪರಿಸರ, ಪ್ರಕೃತಿದತ್ತ ಪರಿಸರ ಎಂದು ಮೊದಲಾಗಿ ಕರೆಯುತ್ತೇವೆ. ಇದು ನೆಲ, ಜಲ, ಗಾಳಿ, ಹಳ್ಳ, ಕೊಳ್ಳ, ನದಿ, ಸಮುದ್ರ, ಸಾಗರ, ಖನಿಜ ಸಂಪತ್ತು ಬೆಟ್ಟ ಗುಡ್ಡ, ಪರ್ವತ, ಗೃಹ, ನಕ್ಷತ್ರ ಮೊದಲಾದವುಗಳನ್ನು ಒಳಗೊಂಡಿರುತ್ತದೆ. ಇದನ್ನು ಭೂಗೋಳ, ಜಲಗೋಳ ಮತ್ತು ವಾಯುಗೋಳ ಎಂಬುದಾಗಿ ವಿಂಗಡಿಸಬಹುದಾಗಿದೆ. ಇದೆಲ್ಲ ಮಾನವನ ಮೇಲೆ ಪರಿಣಾಮಕಾರಿ ಪ್ರಭಾವ ಬೀರುತ್ತದೆ. ಬೆಟ್ಟ ಗುಡ್ಡಗಳಲ್ಲಿ ವಾಸಿಸುವ ಜನರ ಪರಿಸರವೇ ಬೇರೆ.ಮರುಭೂಮಿ ಪ್ರದೇಶದಲ್ಲಿ ವಾಸಿಸುವ ಪರಿಸರವು ಬೇರೆಯದಾಗಿರುತ್ತದೆ. ಕಾಡಿನಲ್ಲಿ ಬದುಕುವವರು ಕುರಿ,ಮೇಕೆ ಮೊದಲಾದುವುಗಳನ್ನು ಸಾಕುತ್ತಿದ್ದರು. ಅವರಿಗೆ ಆಹಾರದ ಕೊರತೆ ಕಂಡುಬಂದಾಗ ಆವುಗಳನ್ನೇ ಆಹಾರವನ್ನಾಗಿ ಬಳಸುತ್ತಿದ್ದರು. ಸಮುದ್ರ ತೀರದಲ್ಲಿ ವಾಸಿಸುವವರು ಸಮುದ್ರದ ಮೀನನ್ನೇ ಮುಖ್ಯ ಆಹಾರವಾಗಿ ಸೇವಿಸುತ್ತಾರೆ.

**ಜೈವಿಕ ಪರಿಸರ:**

ಇದು ಮಾನವ, ಪ್ರಾಣಿ, ಪಕ್ಷಿ, ಸಸ್ಯ ಸಂಕುಲಗಳನ್ನು ಒಳಗೊಂಡಿರುತ್ತದೆ. ಇದರಲ್ಲಿ ಕೋಟ್ಯಾನುಕೋಟಿ ಪ್ರಬೇದಗಳ ಜೀವ ಜಗತ್ತು ಸೇರಿರುತ್ತದೆ. ಇದರಮೇಲೆ ದೇಶ ಕಾಲ ಮತ್ತು ಪರಿಸ್ಥಿಗಳ ಪ್ರಭಾವ ಬೀರುತ್ತದೆ. ಭೂ ಭಾಗದ ಮೇಲಿನ ಅರಣ್ಯಗಳ ಪ್ರಮಾಣ, ಅವುಗಳ ಅಭಿವೃದ್ಧಿ, ಅವುಗಳ ನಾಶ, ಮಾಲಿನ್ಯ ಮೊದಲಾದವು ತಮ್ಮದೇ ಆದ ಪ್ರಭಾವ ಬೀರುತ್ತದೆ.

**ಆರ್ಥಿಕ ಪರಿಸರ:**

ಇದು ಒಟ್ಟಾರೆ ಮಾನವನ ಆರ್ಥಿಕ ಕ್ಷೇತ್ರವನ್ನು ಒಳಗೊಂಡಿರುತ್ತದೆ. ಇದರಲ್ಲಿ ಆದಿವಾಸಿ ಜೀವನ, ಗ್ರಾಮೀಣ ಜೀವನ ಮತ್ತು ನಗರ ಜೀವನಕ್ರಮಗಳು ವಿಶಿಷ್ಟ ರೀತಿಯಲ್ಲಿ ಪ್ರಭಾವಿತವಾಗುತ್ತವೆ.

**ಸಾಮಾಜಿಕ ಪರಿಸರ:**

ಇದು ಮಾನವನ ಸಾಮಾಜಿಕ ಕ್ಷೇತ್ರವನ್ನು ಒಳಗೊಂಡಿರುತ್ತದೆ. ಮಾನವನ ಸಾಮಾಜಿಕ ಪರಿಸರವು ವಿಶಿಷ್ಟ ಸ್ವರೂಪದ್ದಾಗಿರುತ್ತದೆ. ಮಕ್ಕಳ ವ್ಯಕ್ತಿತ್ವ ಮತ್ತು ವ್ಯಕ್ತಿಗಳ ವ್ಯಕ್ತಿತ್ವವನ್ನು ರೂಪಿಸುವ ಕಾರ್ಯದಲ್ಲಿ ಸಾಮಾಜಿಕ ಪರಿಸರ ಬಹಳ ಮುಖ್ಯ ಪಾತ್ರ ವಹಿಸುತ್ತದೆ. ವ್ಯಕ್ತಿಯ ಗುಣ ಮತ್ತು ನಡೆತೆಗಳ ಮೇಲೆ ಸಾಮಾಜಿಕ ಪರಿಸರದ ಪ್ರಭಾವ ಸಿಂಹಪಾಲು. ವ್ಯಕ್ತಿಯು ಹೇಗೆ ಬೆಳೆಯಬೇಕು ಎಂಬುದನ್ನು ನಿರ್ಧರಿಸುವುದು ಸಾಮಾಜಿಕ ಪರಿಸರ. ಇದು ವ್ಯಕ್ತಿಯೊಬ್ಬನನ್ನು ಮೌಲ್ಯಾಧಾರಿತವಾಗಿ ರೂಪಗೊಳ್ಳುವಂತೆ ಎಚ್ಚರಿಕೆ ವಹಿಸುತ್ತದೆ.

ಪರಿಸರ ಜಾಗೃತಿಗಾಗಿ ನಿಯಮಿತವಾಗಿ ಪರಿಸರ ವಾರ್ತಾಪತ್ರಗಳನ್ನು ಪ್ರಕಟಿಸುತ್ತಿದ್ದು ಕಾಲಕಾಲಕ್ಕೆ ಲಭ್ಯವಿರುವ ಅಂಕಿ-ಅಂಶಗಳನ್ನು ಆಧರಿಸಿದ, ಪರಿಸರ ಸಂರಕ್ಷಣೆ ಸಂದೇಶವನ್ನು ತಿಳಿಸಿ ಜಾಗೃತಿ ಉಂಟುಮಾಡುತ್ತಿದೆ. ಜಲಸಂಪನ್ಮೂಲ, ಮಳೆನೀರಿನ ಕೊಯ್ಲು, ಜೈವಿಕ ಇಂಧನ ಬಳಕೆ, ಶಬ್ದ ಮಾಲಿನ್ಯ, ನಗರಗಳಲ್ಲಿ ಗೃಹಬಳಕೆಯ ಶಕ್ತಿಯ ಅಂಕಿ ಅಂಶಗಳ ವರದಿ, ಸಾವಯವ ಕೃಷಿ, ಅರಣ್ಯ ನಾಶ, ಒಳಾಂಗಣ ಮಾಲಿನ್ಯ, ಜೀವಾಣು ವಿಷ, ಪರಿಸರ ಸ್ನೇಹಿ ಕಟ್ಟಡ ನಿರ್ಮಾಣ ಸಾಮಗ್ರಿಗಳು, ಜೈವಿಕ ವೈವಿಧ್ಯ, ಇ-ತ್ಯಾಜ್ಯ, ಅಪಾಯಕಾರಿ ತ್ಯಾಜ್ಯ, ಜಾಗತಿಕ ತಾಪಮಾನ ಏರಿಕೆ, ಓಝೋನ್ ಪದರ ಕ್ಷೀಣಿಸುತ್ತಿರುವುದು, ಪ್ಲಾಸ್ಟಿಕ್, ಪರಿಸರ ಅವಘಡಗಳು, ಸಾವಯವ ಕೃಷಿ, ಹೈಡ್ರೋಫೋನಿಕ್ಸ್, ನೀರಿನ ತಾಣಗಳ ಸಂರಕ್ಷಣೆ ಹೀಗೆ ವಿವಿಧ

ಪುಟ – 5ರಲ್ಲಿ ಮುಂದುವರಿಯುವುದು . . .

# ಅಲೊವೆರ

ಹಿಂದಿನ ಸಂಚಿಕೆಯಿಂದ . . . .

ಡಾ.ರಾಜಶೇಖರ್, ಕ್ರಾಸ್ ಸಂಸ್ಥೆ, ಬೆಂಗಳೂರು



ಅಮೇರಿಕ  ಮತ್ತು ಯುರೋಪ್ ನಂಥ ಮುಂದುವರಿದ ರಾಷ್ಟ್ರಗಳು ಮತ್ತು ಆಯುರ್ವೇದದಲ್ಲಿ ನಿಸ್ಸೀಮರಾದ ಭಾರತ, ಚೈನ ಮತ್ತು ಜಪಾನಿನಂಥ ದೇಶಗಳು ಈ ಅದ್ಭುತ ಸಸ್ಯದ ಬಗ್ಗೆ ಹೆಚ್ಚಿನ ಕಾಳಜಿ ವಹಿಸುತ್ತಿದ್ದಾರೆ, ಇದರ ಪರಿಣಾಮ ಅಲೊವೆರದ ಮತ್ತಷ್ಟು ಉತ್ತಮ ಗುಣಗಳು ಹೊರಬರಲಿದ್ದು ಅಲೊವೆರವು ಹೆಚ್ಚು ಹೆಚ್ಚು ಜನಪ್ರಿಯ ವಾಗುವೂದರಲ್ಲಿ ಸಂದೇಹವಿಲ್ಲ.

ಈಗ ಅಲ್ಪ ಪ್ರಮಾಣದಲ್ಲಿ ಉತ್ಪಾದನೆಗೊಳ್ಳುತ್ತಿರುವ ಈ ಸಸ್ಯವು ಮುಂದಿನ ದಿನಗಳಲ್ಲಿ ಬೇಡಿಕೆ ಹೆಚ್ಚಾಗಿ ಆಧುನಿಕ ಕೃಷಿ ಪದ್ಧತಿಗಳನ್ನು ಅಳವಡಿಸಿಕೊಂಡು ಅತಿ ಹೆಚ್ಚು ಉತ್ಪಾದನೆಗೆ ಮುನ್ನೇರಬಹುದು, ಸಾವಯವ ಪದ್ಧತಿಯಲ್ಲಿ ಈ ಬೆಳೆಯನ್ನು ಬೆಳೆಯುವುದರಿಂದ ಇದರ ಗುಣಮಟ್ಟದಲ್ಲಿಯೂ ಉತ್ತಮಿಕೆಯನ್ನು ಕಾಣಬಹುದಾಗಿದೆ. ಉತ್ಪಾದನೆಯ ಜೊತೆಜೊತೆಯಲ್ಲಿ ಸಂಶೋಧನೆಗಳು ಸಹ ಬಿರುಸಾಗಲಿವೆ. ಇದರ ಪರಿಣಾಮ ಅಲೊವೆರದ ಉತ್ಪನ್ನಗಳು ಉತ್ತಮ ಗುಣಮಟ್ಟದೊಂದಿಗೆ ವಿವಿಧ ಮಾದರಿಗಳಲ್ಲಿ ಮಾರುಕಟ್ಟೆಯಲ್ಲಿ ಲಭ್ಯವಾಗಲಿವೆ. (ಜೆಲ್, ಲೋಶನ್ ಕ್ರೀಮ್ ಜ್ಯೂಸ್ ಮತ್ತು ಕಾಪ್ಸೂಲ್). ಮುಂದಿನ ದಿನಗಳಲ್ಲಿ ಅಲೊವೆರದ ಸಂಸ್ಕರಣೆಯ ಸುಲಭ ವಿಧಾನಗಳು ಬಳಕೆಗೆ ಬರಲಿದ್ದು ಆಗ ಮನೆಮನೆಯ ಅಂಗಳದಲ್ಲಿ ಕುಂಡಗಳಲ್ಲಿ ಅಲೊವೆರವನ್ನು ಕಾಣಬಹುದಾಗಿದೆ, ಈ ವಿಧವಾಗಿ ಮನೆಮಟ್ಟಿಗಿನ ಅಲೊವೆರದ ಉತ್ಪಾದನೆ ಸಂಸ್ಕರಣೆ ಮತ್ತು ಉಪಯೋಗವನ್ನು ಕಾಣಬಹುದು.

**ಭವಿಷ್ಯ:** ಅಲೊವೆರದ ಸಾರದಲ್ಲಿ ಇರಬಹುದಾದ ಅಂಶಗಳು ಅದರ ತಳಿ , ಬೆಳೆ ಮಾಡಿದ ಪ್ರದೇಶ, ಹವಾಗುಣ ಹಾಗೂ ಗಿಡದ ವಯಸ್ಸನ್ನು ಆದರಿಸಿರುತ್ತವೆ. ಹಾಗೆಯೇ ಅಲೊವೆರದ ಸಂಸ್ಕರಣಾ ಪದ್ಧತಿಯು ಅತಿ ಮುಖ್ಯವಾಗಿರುತ್ತದೆ. ಇದಕ್ಕನುಸಾರವಾಗಿ ಅದರ ಸಾರದಲ್ಲಿರುವ ಅಂಶಗಳ ಸಂಖ್ಯೆ ಮತ್ತು ಗುಣ ಮಟ್ಟವು ವ್ಯತ್ಯಾಸವಾಗುತ್ತದೆ. ವಾಣಿಜ್ಯ ದೃಷ್ಟಿಯಿಂದಾದ ಸಂಸ್ಕರಣೆಯು ಸಾಮಾನ್ಯವಾಗಿ ಜಜ್ಜಿ  ಹಿಂಡಿ ರಸ ತೆಗೆದು ವಿವಿಧ ಹಂತಗಳಲ್ಲಿ ಸೋಸಿ ಸ್ಥಿರೀಕರಿಸುವುದರಿಂದ ಇಚ್ಚಿತ ಪರಿಣಾಮ ದೊರೆಯುವ ಖಾತರಿಯೇನಿಲ್ಲ ಏಕೆಂದರೆ ಈ ಪದ್ಧತಿಯಿಂದ ತೆಗೆದ ರಸದಲ್ಲಿ "ಅಲೊಇನ್" ಎಂಬ ಹಳದಿ ಬಣ್ಣದ ಲ್ಯಾಟೆಕ್ಸ್( ಇದು ಲೋಳೆಸರ ಎಲೆಯ ಹಸಿರು ಪದರ ಮತ್ತು "ಜೆಲ್" ನ ಮಧ್ಯೆ ಇರುತ್ತದೆ. ಅಂತರರಾಷ್ಟ್ರೀಯ ಮಾರುಕಟ್ಟೆಯಲ್ಲಿ ಮುಂಚೂಣಿಯಲ್ಲಿರುವ ಅಲೊವೆರದ ಉತ್ಪನ್ನಗಳಲ್ಲಿ ಕೇವಲ ಐದನೇ ಒಂದು ಭಾಗ ಮಾತ್ರ ಇಚ್ಛಿತ ಪ್ರಮಾಣದಲ್ಲಿ ಪಾಲಿಸ್ಯಾಕರೈಡ್ "ಅಸಿಮನಾನ್" ಇರುವುದು ಕಂಡುಬರುತ್ತದೆ. ಇನ್ನು ಇದರ ಜೊತೆ ಬೆರೆಸುವ ಇತರ ಪದಾರ್ಥಗಳಾದ  ಮಾಲ್ಟೊಡೆಕ್ಸ್ಟ್ರಿನ್, ಗ್ಲೂಕೋಸ್, ಗ್ಲಿಸರಿನ್ ಮತ್ತು ಮಾಲಿಕ್ಆಸಿಡ್ನಂಥವುಗಳ  ಅನಿರ್ಭಂಧಿತ  ಬೆರೆಕೆಯನ್ನು ಸರಿದೂಗಿಸಲು "ಅಂತರರಾಷ್ಟ್ರೀಯ  ಅಲೋಸೈನ್ಸ್ ಕೌನ್ಸಿಲ್" ಎಂಬ ಸಂಸ್ಥೆಯು  ಒಂದು ವ್ಯವಸ್ಥಿತ ಪದ್ಧತಿಯಂತೆ ಪರಿಣಾಮಕಾರಿಯಾಗಿದ್ದು ಅಲೊವೆರದ ವಾಣಿಜ್ಯ ಪದಾರ್ಥಗಳ ಗುಣಮಟ್ಟ ಹಾಗೂ  ಪ್ರಮಾಣವನ್ನು ಧೃಢೀಕರಿಸುವ ವ್ಯವಸ್ಥೆಯನ್ನು ಮಾಡಿದೆ.

ಉಪಯುಕ್ತತೆ ಮತ್ತು ಸುರಕ್ಷತೆಯ ದೃಷ್ಟಿಯಿಂದ ನೋಡುವುದಾದರೆ ಮಾರುಕಟ್ಟೆಯಲ್ಲಿ ದೊರೆಯುವ ಹೆಚ್ಚಿನ ಅಲೊವೆರದ ಉತ್ಪನ್ನಗಗಳನ್ನು ಪ್ರಮಾಣೀಕರಿಸಿರುವುದಿಲ್ಲ. ಇದರಿಂದಾಗಿ ಈ ಉತ್ಪನ್ನಗಳ ಬಳಕೆಯ ನಿಗದಿತ ಪ್ರಮಾಣ ಮತ್ತು ಉದ್ದೇಶಗಳನ್ನು ನಿರ್ಧರಿಸಲಾಗುವುದಿಲ್ಲ. ಇದರಿಂದಾಗಿ ಬಳಸುವ ಮುನ್ನ ಡಾಕ್ಟರುಗಳ ಸಲಹೆ ಅತೀ ಮುಖ್ಯ.

ಇತ್ತೀಚಿನ ವ್ಯವಸ್ಥಿತ ವಿಮರ್ಶೆಗಳನ್ನು ನಡೆಸಿದ "ನ್ಯಾಚುರಲ್ ಸ್ಟಾಂಡರ್ಡ್ಸ್ ಕೊಲಾಬರೇಷನ್" ಎಂಬ ಸಂಸ್ಥೆಯು ಕೆಲವು ತೊಂದರೆಗಳಿಗೆ ಅಲೊವೆರ ದ್ರಾವಣದ ರೂಪದಲ್ಲಿ ಸೇವಿಸುವುದನ್ನು ಅನುಮೋದಿಸಿದೆಯಾದರೂ ಡಾಕ್ಟರುಗಳ ಸಲಹೆ ಅನಿವಾರ್ಯ.

**ಅಲೊವೆರದ ಅಡ್ಡ ಪರಿಣಾಮಗಳು –  ಅಲರ್ಜಿ : ಪರಿಹಾರ –** ಈರುಳ್ಳಿ ಬೆಳ್ಳುಳ್ಳಿ ಟುಲಿಪ್ಸ್ ಪದಾರ್ಥಗಳನ್ನು ಸೇವಿಸಬಾರದು. ಮೂತ್ರಪಿಂಡ ಹಾಗೂ ಹೃದಯ ಸಂಬಂಧಿ ರೋಗಿಗಳು ಸೇವಿಸಬಾರದು, ಲೋಶನ್‌ಗಳ ಬಳಕೆಯ ನಂತರ ಸೂರ್ಯನ ಬಿಸಿಲಿಗೆ ಹೋಗಬಾರದು.

**ಸಂಶೋಧನೆಯ ಅಗತ್ಯತೆ:**

- ಲಭ್ಯವಿರುವ ಹಲವಾರು ಅಲೊವೆರದ ಉತ್ಪನ್ನಗಳಲ್ಲಿ ನಿರ್ಧಿಷ್ಟವಾದ ಪ್ರಮಾಣವಾಗಲೀ, ಅಳತೆಯಾಗಲೀ ಧೃಢಪಟ್ಟಿರದ ಕಾರಣ ಇದರ ಉಪಯೋಗವು ನಿರ್ಧಿಷ್ಟವಾಗಿರುವುದಿಲ್ಲ ಆದುದರಿಂದ ಒಂದು ಉತ್ಪನ್ನದಲ್ಲಿರಬಹುದಾದ ಅಂಶಗಳ ಪ್ರಮಾಣದ ಅರಿವು ಬೇಕಾಗಿದೆ.
- ಒಂದು ಖಾಯಿಲೆಗೆ ಇಂಥಹುದೇ ಮಿಶ್ರಣ ಮತ್ತು ಪ್ರಮಾಣ ಹಾಗೂ ಆ ಮಿಶ್ರಣದ ಉಪಯೋಗದ ಮಾದರಿಯ ಅರಿವು ಬೇಕಾಗಿದೆ.
- ಒಂದು ಮಿಶ್ರಣದಲ್ಲಿರುವ ಅಂಶಗಳು ಮತ್ತು ಅವುಗಳ ಕ್ರಿಯಾ ಶೀಲತೆ – ಪ್ರತ್ಯೇಕವಾಗಿ ಅಥವಾ ಸಂಯೋಜನೆಯ ರೂಪದಲ್ಲಿ ಯಾವ ಅಂಶ ಹೇಗೆ ವರ್ತಿಸುತ್ತದೆ ಎಂಬುದರ ಅರಿವು ಬೇಕಾಗಿರುತ್ತದೆ.
- ಇದರ ದುಷ್ಪರಿಣಾಮಗಳ ಮತ್ತು ಪ್ರತಿವಿಷಗಳ ಬಗ್ಗೆಯೂ ಸಂಶೋಧನೆಗಳ ಅಗತ್ಯವಿದೆ.

# ಹೈದ್ರಾಬಾದ್ ಕರ್ನಾಟಕಕ್ಕೆ ವರದಾನವಾಗಲಿರುವ ಪರಿಚ್ಛೇದ 371 (ಜೆ)

**ಹಿಂದಿನ ಸಂಚಿಕೆಯಿಂದ . . . .**

**ವರ್ಗೀಸ್ ಜಿ.ಎಂ.**

ಸಂವಿಧಾನದತ್ತವಾದ ಈ ವಿಶೇಷ ಸ್ಥಾನಮಾನವನ್ನು ಆಧರಿಸಿ ಹೈದ್ರಾಬಾದ್ ಕರ್ನಾಟಕ ಪ್ರದೇಶದ ಸಮಗ್ರ ಅಭಿವೃದ್ಧಿಗೆ ಅನುಕೂಲವಾಗುವಂತೆ ಕೇಂದ್ರ ಸರ್ಕಾರಕ್ಕೆ ಕರ್ನಾಟಕ ಸರ್ಕಾರವು ಒಂದು ವರದಿಯನ್ನು ಕಳುಹಿಸಿತ್ತು. ಈ ವರದಿಯನ್ನು ಕೇಂದ್ರ ಸರ್ಕಾರ ಅಂಗೀಕರಿಸಿತು. ಹೈದ್ರಾಬಾದ್-ಕರ್ನಾಟಕ ಪ್ರದೇಶದ ಅಭಿವೃದ್ಧಿಗೆ ಸಂವಿಧಾನದ 371 (ಜೆ) ಕಲಂನ ಅನ್ವಯ ಕರ್ನಾಟಕದ ರಾಜ್ಯಪಾಲರ ಅಧ್ಯಕ್ಷತೆಯಲ್ಲಿ ಪ್ರತ್ಯೇಕವಾದ ಅಭಿವೃದ್ಧಿ ಮಂಡಳಿಯನ್ನು ರಚಿಸಲು ಅವಕಾಶ ನೀಡಿದೆ. ಇದರಿಂದ ಹೊಸದಾಗಿ (2013 ರಲ್ಲಿ) ಅಸ್ತಿತ್ವಕ್ಕೆ ಬಂದಿರುವ ಹೈದ್ರಾಬಾದ್ ಕರ್ನಾಟಕ ಪ್ರದೇಶಾಭಿವೃದ್ಧಿ ಮಂಡಳಿಗೆ ರಾಜ್ಯಪಾಲರು ಅಧ್ಯಕ್ಷರಾಗಿದ್ದು, ಈ ಪ್ರದೇಶದಿಂದ ಚುನಾಯಿತರಾಗಿರುವ ಸಂಸದರು, ವಿಧಾನಸಭೆ ಹಾಗೂ ವಿಧಾನ ಪರಿಷತ್ತು ಸದಸ್ಯರು, ಜಿಲ್ಲಾ ಪಂಚಾಯತಿ ಹಾಗೂ ಪೌರಸಂಸ್ಥೆಗಳ ಅಧ್ಯಕ್ಷರು ಸದಸ್ಯರಾಗಿರುತ್ತಾರೆ. ಇವರ ಜತೆಗೆ ರಾಜ್ಯ ಯೋಜನಾ ಕಾರ್ಯವಿಧಾನ, ಹಣಕಾಸು ಮತ್ತು ಲೆಕ್ಕಪತ್ರ, ನೀರಾವರಿ ಮತ್ತು ಲೋಕೋಪಯೋಗಿ, ಕೃಷಿ ಮತ್ತು ಕೈಗಾರಿಕೆ, ಶಿಕ್ಷಣ ಮತ್ತು ಉದ್ಯೋಗ ಕ್ಷೇತ್ರದ ಪರಿಣಿತರನ್ನು ಸರ್ಕಾರ ಈ ಮಂಡಳಿಗೆ ನಾಮಕರಣ ಮಾಡುತ್ತದೆ. ಗುಲ್ಬರ್ಗಾ ವಿಭಾಗದ ಪ್ರಾದೇಶಿಕ ಆಯುಕ್ತರು, ಯೋಜನಾ ಮತ್ತು ಆರ್ಥಿಕ ಇಲಾಖೆಗಳ ಕಾರ್ಯದರ್ಶಿಗಳು ಪದನಿಮಿತ್ತ ಸದಸ್ಯರಾಗಿರುತ್ತಾರೆ. ಈ ಮಂಡಳಿಯ ಕಾರ್ಯದರ್ಶಿಯನ್ನಾಗಿ ಸರ್ಕಾರದ ಕಾರ್ಯದರ್ಶಿ ಮಟ್ಟದ ಒಬ್ಬ ಅಧಿಕಾರಿಯನ್ನು ಸರ್ಕಾರ ನೇಮಿಸುತ್ತದೆ. ಈ ಅಭಿವೃದ್ಧಿ ಮಂಡಳಿಗೆ ಬೇಕಾಗುವ ಅಧಿಕಾರಿಗಳು ಹಾಗೂ ಸಿಬ್ಬಂದಿಯನ್ನು ಸರ್ಕಾರವೇ ನೇಮಿಸುತ್ತದೆ. ಗುಲ್ಬರ್ಗಾದಲ್ಲಿ ಈ ಮಂಡಳಿಯ ಪ್ರಧಾನ ಕಚೇರಿ ಇರುತ್ತದೆ.

**ಕಲಂ 371 (ಜೆ) ಅಡಿ ಈ ಕೆಳಗಿನಂತೆ ಮೀಸಲಾತಿ ಸೌಲಭ್ಯ ದೊರೆಯಲಿದೆ :**

- ಉನ್ನತ ಶಿಕ್ಷಣ, ತಾಂತ್ರಿಕ, ವೈದ್ಯಕೀಯ ಶಿಕ್ಷಣ ಹಾಗೂ ಇತರೆ ವೃತ್ತಿಪರ ಶಿಕ್ಷಣ ಸಂಸ್ಥೆಗಳಲ್ಲಿ ಹೈದರಾಬಾದ್ ಕರ್ನಾಟಕ ಭಾಗದ ಶೇ.70ರಷ್ಟು ಸ್ಥಾನಗಳನ್ನು ಸ್ಥಳೀಯರಿಗೆ ಮೀಸಲಿಡಲಾಗಿದೆ.
- ರಾಜ್ಯದ ವಿವಿಧೆಡೆಯ ಉನ್ನತ ಶಿಕ್ಷಣ, ತಾಂತ್ರಿಕ, ವೈದ್ಯಕೀಯ ಶಿಕ್ಷಣ ಹಾಗೂ ಇತರೆ ವೃತ್ತಿಪರ ಶಿಕ್ಷಣ ಸಂಸ್ಥೆಗಳಲ್ಲಿ ಶೇ.8ರಷ್ಟು ಸ್ಥಾನಗಳನ್ನು ಈ ಭಾಗದ ವಿದ್ಯಾರ್ಥಿಗಳಿಗೆ ಮೀಸಲಿರಿಸಿದೆ.
- ಹೈದರಾಬಾದ್ ಕರ್ನಾಟಕ ಭಾಗದಲ್ಲಿನ ಗ್ರೂಪ್ 'ಎ' (ಜೂನಿಯರ್ ಸ್ಕೇಲ್), ಗ್ರೂಪ್ 'ಬಿ' ಹುದ್ದೆಗಳಲ್ಲಿ ಶೇ.75ರಷ್ಟು ಹುದ್ದೆಯನ್ನು ಸ್ಥಳೀಯರಿಗೆ ಮೀಸಲಿರಿಸಿದೆ.
- ಅದೇರೀತಿ, ಗ್ರೂಪ್ 'ಸಿ' ಹುದ್ದೆಗಳಲ್ಲಿ ಶೇ.80ರಷ್ಟು ಹಾಗೂ ಗ್ರೂಪ್ 'ಡಿ' ಹುದ್ದೆಗಳಲ್ಲಿ ಶೇ. 85 ರಷ್ಟು ಹುದ್ದೆಗಳನ್ನು ಸ್ಥಳೀಯರಿಗೆ ಮೀಸಲಿರಿಸಿದೆ.
- ರಾಜ್ಯಮಟ್ಟದ ಹುದ್ದೆಗಳ ನೇಮಕಾತಿಯಲ್ಲಿ ಶೇ.8ರಷ್ಟು ಹುದ್ದೆಗಳನ್ನು ಹೈದರಾಬಾದ್ ಕರ್ನಾಟಕದ ಭಾಗದವರಿಗೆ ಮೀಸಲು ಇಡಲಾಗಿದೆ.

ಈ ಮೀಸಲಾತಿ ಸೌಲಭ್ಯ ಪಡೆಯಲು ಮಾನದಂಡಗಳನ್ನು ಕೂಡಾ ರೂಪಿಸಲಾಗಿದೆ. ಹೈದ್ರಾಬಾದ್ ಕರ್ನಾಟಕ ಭಾಗದಲ್ಲಿ ಉದ್ಯೋಗ ಮತ್ತು ಶಿಕ್ಷಣ ಮೀಸಲಾತಿ ಸೌಲಭ್ಯ ಪಡೆಯಲು ಸ್ಥಳೀಯರು' ಎಂಬ ಪರಿಗಣನೆಗೆ ಮೂರು ಮಾನದಂಡಗಳನ್ನು ನಿಗದಿಪಡಿಸಲಾಗಿದೆ.ಅವುಗಳು;

- ಜನವರಿ 1, 2013ಕ್ಕೆ ಮುನ್ನ ಅಲ್ಲಿ ಜನಿಸಿದವರು,
- ಜುಲೈ 1, 2013ಕ್ಕೆ 10 ವರ್ಷಗಳ ಮೊದಲು ಅವರ ಪೋಷಕರು ಈ ಭಾಗದಲ್ಲಿ ನೆಲೆಸಿದ್ದರೆ ಹಾಗೂ ಜನವರಿ 1, 2013ಕ್ಕೆ ಮುನ್ನ ಈ ಭಾಗದ ವಿಳಾಸದಲ್ಲಿ ಸ್ಥಿರಾಸ್ತಿ ಹೊಂದಿರುವವರು,
- ರೇಷನ್ ಕಾರ್ಡ್ ಹಾಗೂ ಮತದಾರರ ಪಟ್ಟಿಯಲ್ಲಿ ಹೆಸರು ಇದ್ದವರೂ ಸ್ಥಳೀಯರು ಎಂದು ಪರಿಗಣಿಸಿ, ಮೀಸಲಾತಿ ಸೌಲಭ್ಯಕ್ಕೆ ಅರ್ಹರಾಗಿರುತ್ತಾರೆ.

ಹೈದ್ರಾಬಾದ್ ಕರ್ನಾಟಕಕ್ಕೆ ವಿಶೇಷ ಸ್ಥಾನಮಾನ ಕಲ್ಪಿಸಿರುವುದರಿಂದ ಈ ಪ್ರದೇಶ ವ್ಯಾಪ್ತಿಯ ಬೀದರ್, ಗುಲ್ಬರ್ಗಾ ಯಾದಗಿರಿ, ರಾಯಚೂರು, ಕೊಪ್ಪಳ ಮತ್ತು ಬಳ್ಳಾರಿ ಜಿಲ್ಲೆಗಳಲ್ಲಿ ಅಭಿವೃದ್ಧಿಯ ಹೊಸ ಶಕೆ ಆರಂಭವಾಗಿದೆ. ಮುಂಬರುವ ವರ್ಷಗಳಲ್ಲಿ ಸಾಮಾಜಿಕ, ಆರ್ಥಿಕ, ಶೈಕ್ಷಣಿಕ, ಸಾಂಸ್ಕೃತಿಕ ಮತ್ತು ರಾಜಕೀಯವಾಗಿ ಅಭಿವೃದ್ಧಿ ಹೊಂದುವುದರಲ್ಲಿ ಸಂಶಯವೇ ಇಲ್ಲ.

---

**3ನೇ ಪುಟದಿಂದ .......................**

ವಿಷಯಗಳ ಕುರಿತಂತೆ ಮಾಹಿತಿ ಪ್ರಸಾರದ ಮೂಲಕ ಜನರಿಗೆ ತಲುಪಬೇಕಾಗಿದೆ.

ಭೂಮಿಯ ಮೇಲೆ ಹುಟ್ಟುವ ಪ್ರತಿ ಜೀವರಾಶಿಗೂ ಬದುಕುವ ಹಕ್ಕಿದೆ. ಅದನ್ನು ಕಸಿದುಕೊಳ್ಳುವ ಹಕ್ಕು ಯಾರಿಗೂ ಇಲ್ಲ. ಎಲ್ಲವೂ ನನಗೆ ಬೇಕು ಎಂಬ ಧೋರಣೆ ಬದಲಾಗಬೇಕಾಗಿದೆ. ನಮ್ಮ ಬದುಕಿಗೆ ನೆರವಾಗಿರುವ ಪರಿಸರದ ಬಗ್ಗೆ ಪ್ರೀತಿ ಬೆಳೆಸಿಕೊಳ್ಳಬೇಕಾಗಿದೆ.

ಪ್ರತಿ ವರ್ಷ ವಿಶ್ವ ಪರಿಸರ ದಿನವನ್ನು ಜಗತ್ತಿನಾದ್ಯಂತ ಆಚರಿಸಲಾಗುತ್ತದೆ. ಪರಿಸರ ಸಂರಕ್ಷಣೆಯ ಅಗತ್ಯದ ಬಗ್ಗೆ ಜನ ಜಾಗೃತಿ ಮೂಡಿಸುವುದು, ಪರಿಸರದ ಬಗೆಗಿನ ಕಾಳಜಿ ಹೆಚ್ಚಿಸುವುದು, ಪರಿಸರ ಸಂರಕ್ಷಣೆಯನ್ನು ಒಂದು ಜನಾಂದೋಲನವಾಗಿ ಮಾಡುವುದು ಪರಿಸರ ದಿನ ಆಚರಣೆಯ ಉದ್ದೇಶ. ಪ್ರತಿ ವರ್ಷ ವಿಶ್ವಸಂಸ್ಥೆಯ ಪರಿಸರ ಕಾರ್ಯಕ್ರಮ (ಯುಎನ್‌ಪಿ)ದಲ್ಲಿ ಪರಿಸರ ಸಂರಕ್ಷಣೆಗೆ ಪೂರಕವಾದ ಒಂದು ವಸ್ತು ವಿಷಯದ ಘೋಷಣೆ ಮಾಡಲಾಗುತ್ತದೆ. ಈ ವರ್ಷದ ಘೋಷಣೆ "ZERO TOLERANCE FOR ILLEGAL WILDLIFE TRADE – **ವನ್ಯ ಜೀವಿಗಳ ಕಳ್ಳ ಸಾಗಣೆ ವಿರುದ್ಧ ಶೂನ್ಯ ಸೈರಣೆ"**. ಇದಕ್ಕೆ ನಮ್ಮೆಲ್ಲರ ಸಹಮತವಿರಲಿ.

**ಮುಂದುವರಿಯುವುದು . . .**

# ಕೈ ತೋಟ ಅಥವಾ ಹಿತ್ತಲ ತೋಟ – ಒಂದು ಒಳನೋಟ

ವರ್ಗೀಸ್ ಜಿ.ಎಂ.



ವಿಶ್ವ ಆಹಾರ ಸಂಸ್ಥೆಯ ಪ್ರಕಾರ ಈ ಜಗತ್ತಿನಲ್ಲಿ 100 ಕೋಟಿ ಜನಕ್ಕೆ ಉಣ್ಣಲು ಅನ್ನವಿಲ್ಲ. ಇನ್ನೊಂದೆಡೆ 100 ಕೋಟಿ ಜನ ಸಿಕ್ಕಾಪಟ್ಟೆ ಉಂಡು ಬೊಜ್ಜು ಬೆಳೆಸಿ ಅರಗಿಸಿಕೊಳ್ಳಲು ವೈದ್ಯರ ಸಲಹೆ ಕೇಳುತ್ತಿದ್ದಾರೆ. ಸುಮಾರು 200 ಕೋಟಿ ಜನ ಅಪೌಷ್ಟಿಕತೆಯಿಂದ ಬಳಲುತ್ತಿದ್ದಾರೆ. (ಇದರಲ್ಲಿ ಮಕ್ಕಳು ಮತ್ತು ಮಹಿಳೆಯರು ಮುಕ್ಕಾಲು ಪಾಲು) ಕೃಷಿ ಜೀವ ವೈವಿಧ್ಯತೆಯಿಂದ ನಮ್ಮ ಆಹಾರಕ್ಕೆ ಸಮಗ್ರ ಪೌಷ್ಟಿಕಾಂಶಗಳು ಲಭ್ಯತೆ ಸಾಧ್ಯ. ನಮ್ಮ ಸುತ್ತಲೂ ಲಭ್ಯವಿರುವ ಸ್ಥಳದಲ್ಲಿ ಸಸ್ಯ ಸಮೃದ್ಧಿಯನ್ನು ಬೆಳೆಸುವುದು ಮತ್ತು ಬಳಸುವುದನ್ನು ಕಲಿತರೆ ವೈದ್ಯರ ಶಿಫಾರಸ್ಸಿನ ವಿಟಮಿನ್ ಮಾತ್ರೆಗಳ ಮತ್ತು ಔಷಧಿಗಳ ಅಗತ್ಯವು ಇರುವುದಿಲ್ಲ.

ಹಿಂದಿನ ಕಾಲದಲ್ಲಿ ಜನ ಆಡಿಕೊಳ್ಳುತ್ತಿದ್ದರು ಮನೆಗೆ ಒಂದು ಹಿತ್ತಲಿದ್ದರೇನೇ ಭೂಷಣ ಎಂಬುದಾಗಿ. ಇಂದಿಗೂ ಗ್ರಾಮೀಣ ಪ್ರದೇಶಗಳಲ್ಲಿ ಹಿತ್ತಲನ್ನು ಕಾಣಬಹುದು, ಆದರೆ ಕೈತೋಟ ಕಾಣಸಿಗುವುದು ವಿರಳ. ಈಗ ನಗರ ಪ್ರದೇಶಗಳಲ್ಲಿನ ಮನೆಗಳ ಛಾವಣಿಗಳ ಮೇಲೆ ತರಕಾರಿಗಳನ್ನು ಬೆಳೆಸಲಾರಂಭಿಸಿದ್ದಾರೆ. ಮನೆಯ ಹಿತ್ತಲು ಹಾಗೂ ಸುತ್ತಲೂ ಲಭ್ಯವಿರುವ ಸ್ಥಳದಲ್ಲಿ ಕೈ ತೋಟ ಅಥವಾ ಹಿತ್ತಲ ತೋಟವನ್ನು ಮಾಡಿಕೊಳ್ಳಬಹುದು. ಕೈ ತೋಟ ಮಾಡುವುದರಿಂದ ಪ್ರತಿ ದಿನ ಮನೆ ಬಳಕೆಗೆ ಬೇಕಾಗುವ ತರಕಾರಿಗಳು ಸಿಗುತ್ತವೆ. ಕಡಿಮೆ ಖರ್ಚಿನಲ್ಲಿ ಆಹಾರಕ್ಕೆ ಸಮಗ್ರ ಪೌಷ್ಟಿಕಾಂಶವನ್ನು ಪಡೆಯಬಹುದಾದ ಒಂದು ವಿಧಾನವೇ ಕೈತೋಟ.

ತರಕಾರಿಗಳು ದೈನಂದಿನ ಜೀವನದ ಅತಿ ಮುಖ್ಯ ಸ್ಥಾನವನ್ನು ಪಡೆದಿವೆ. ಅದೂ ವಿಶೇಷವಾಗಿ ಶಾಖಾಹಾರಿಗಳ ಆಹಾರದಲ್ಲಿ. ಆಹಾರದ ರುಚಿಯೊಡನೆ ತರಕಾರಿಗಳು ಪೌಷ್ಟಿಕತೆಯನ್ನು ಹೆಚ್ಚಿಸುತ್ತವೆ. ಆಹಾರ ತಜ್ಞರ ಪ್ರಕಾರ ಸಮತೋಲನ ಆಹಾರದಲ್ಲಿ, ಪ್ರತಿವಯಸ್ಕನೂ 85ಗ್ರಾಂ ಹಣ್ಣುಗಳನ್ನು ಮತ್ತು 300 ಗ್ರಾಂ ತರಕಾರಿಯನ್ನೂ ದಿನವೂ ಸೇವಿಸಲೇ ಬೇಕು, ಆದರೆ ನಮ್ಮ ದೇಶದ ಸದ್ಯದ ತರಕಾರಿ ಉತ್ಪಾದನೆಯಿಂದ ದಿನ ಒಂದಕ್ಕೆ ತಲಾ 120 ಗ್ರಾಂ ತರಕಾರಿ ಮಾತ್ರ ಒದಗಿಸಬಹುದು.

ಹಸಿರು ಎಲೆ ತರಕಾರಿಗಳು ಎಲ್ಲಾ ಮುಖ್ಯ ಪೌಷ್ಟಿಕತೆಯನ್ನು ಒಳಗೊಂಡಿದ್ದು, ಬೆಳವಣಿಗೆಗೆ ಮತ್ತು ಉತ್ತಮ ಆರೋಗ್ಯಕ್ಕೆ ಅತ್ಯಾವಶ್ಯಕ. ಭಾರತದಲ್ಲಿ ವ್ಯಾಪಕ ಪ್ರಮಾಣದಲ್ಲಿ ಹಸಿರು ಎಲೆ ತರಕಾರಿಗಳನ್ನು ತಿನ್ನಲಾಗುತ್ತದೆ. ಅದರಲ್ಲೂ ಜನಪ್ರಿಯವೆಂದರೆ ಪಾಲಕ್ ಸೊಪ್ಪು, ದಂಟಿನ ಸೊಪ್ಪು, ಪುಂಡಿಪಲ್ಯ, ಮೆಂತ್ಯೆ ಸೊಪ್ಪು, ನುಗ್ಗೆ ಸೊಪ್ಪು, ಪುದಿನ ಸೊಪ್ಪು ಇತ್ಯಾದಿ. ಎಲೆಯುಳ್ಳ ತರಕಾರಿಗಳು ಮುಖ್ಯವಾಗಿ ಅಜೈವಿಕ ಪೌಷ್ಟಿಕತೆ ಮತ್ತು ಕಬ್ಬಿಣಾಂಶಭರಿತವಾಗಿರುತ್ತವೆ. ಕಬ್ಬಿಣಾಂಶದ ಕೊರತೆಯಿಂದ ರಕ್ತ ಹೀನತೆಯುಂಟಾಗುತ್ತದೆ. ಇದು ಗರ್ಭಿಣಿಯರಲ್ಲಿ ಮತ್ತು ಹಾಲುಣಿಸುವ ತಾಯಂದಿರಲ್ಲಿ ಮತ್ತು ಮಕ್ಕಳಲ್ಲಿ ಸಾಮಾನ್ಯವಾಗಿ ಕಂಡುಬರುವ ಆರೋಗ್ಯ ಸಮಸ್ಯೆ. ನಮ್ಮ ಪ್ರತಿನಿತ್ಯದ ಆಹಾರಕ್ರಮದಲ್ಲಿ ಹಸಿರು ಎಲೆ ತರಕಾರಿಗಳು ಸೇರಿದ್ದರೆ ರಕ್ತ ಹೀನತೆಯನ್ನು ತಡೆಗಟ್ಟುವುದಲ್ಲದೆ ಉತ್ತಮ ಆರೋಗ್ಯಕ್ಕೆ ಸಹಕಾರಿಯಾಗುತ್ತವೆ. ಹಸಿರು ಎಲೆ ತರಕಾರಿಗಳು ಕ್ಯಾಲ್ಸಿಯಂ, ಬೀಟ್ ಕೆರೋಟೀನ್ ಮತ್ತು ಸಿ ಅನ್ನಾಂಗದ ಸಮೃದ್ಧ ಮೂಲವಾಗಿದೆ. ಭಾರತದಲ್ಲಿ 5 ವರ್ಷ ವಯಸ್ಸಿಗಿಂತ ಕಡಿಮೆ ಇರುವ ಸುಮಾರು 30,000 ಮಕ್ಕಳು ಪ್ರತಿ ವರ್ಷ ಕುರುಡರಾಗುತ್ತಿದ್ದಾರೆ. ಇದಕ್ಕೆ ಕಾರಣ 'ಎ' ಅನ್ನಾಂಗದ ಕೊರತೆ. ಹಸಿರು ಎಲೆ ತರಕಾರಿಗಳಲ್ಲಿನ ಕೆರೊಟೀನ್ ನಮ್ಮ ದೇಹದಲ್ಲಿ ಎ ಅನ್ನಾಂಗವಾಗಿ ಪರಿವರ್ತನೆಗೊಂಡು ಕುರುಡುತನವನ್ನು ತಡೆಯುತ್ತದೆ. ಹಸಿರು ಎಲೆ ತರಕಾರಿಗಳಲ್ಲಿನ ಸಿ ಅನ್ನಾಂಗವನ್ನು ಉಳಿಸುವುದಕ್ಕಾಗಿ ಅವನ್ನು ಹೆಚ್ಚು ಬೇಯಿಸಬಾರದು. ಹಸಿರು ಎಲೆ ತರಕಾರಿಗಳು ಕೆಲವೊಂದು ಬಿ – ಕಾಂಪ್ಲೆಕ್ಸ್ ಅನ್ನಾಂಗಗಳನ್ನು ಕೂಡ ಹೊಂದಿರುತ್ತವೆ. ಹಸಿರು ಎಲೆ ತರಕಾರಿಗಳನ್ನು ವಿವಿಧ ವಯಸ್ಸಿನವರಿಗಾಗಿ ಪ್ರತಿದಿನ ಬಳಸಲು ಈ ರೀತಿ ಶಿಫಾರಸ್ಸು ಮಾಡಲಾಗಿದೆ. ವಯಸ್ಕ ಮಹಿಳೆಯರು ದಿನಕ್ಕೆ 100 ಗ್ರಾಂ, ವಯಸ್ಕ ಪುರುಷರು 40 ಗ್ರಾಂ, 4–6 ವಯಸ್ಸಿನ ಮತ್ತು 10 ವರ್ಷ ಮೀರಿದ ಗಂಡು ಹಾಗೂ ಹೆಣ್ಣು ಮಕ್ಕಳಿಗೆ 50 ಗ್ರಾಂ ಸೇವಿಸಿದರೆ ಪೌಷ್ಟಿಕವಾಗಿ ಸಮತೋಲನದಿಂದ ಕೂಡಿರುತ್ತಾರೆ.

**ಹಸಿರು ಎಲೆ– ತರಕಾರಿಗಳ ಬಳಕೆ:**

ಹಸಿರು ಎಲೆ– ತರಕಾರಿಗಳನ್ನು ಸೇವಿಸಿದಾಗ ಮಕ್ಕಳಿಗೆ ಬೇದಿಯಾಗುತ್ತದೆ ಎಂಬುದು ಸಾಮಾನ್ಯ ನಂಬಿಕೆ. ಇದರಿಂದಾಗಿ ತಾಯಿಯಂದಿರು ಇಂಥಹ ಪೌಷ್ಟಿಕ ಪದಾರ್ಥಗಳನ್ನು ಮಕ್ಕಳಿಗೆ ಕೊಡುವಲ್ಲಿ ಹಿಂಜರಿಯುತ್ತಾರೆ. ಹಲವಾರು ಬ್ಯಾಕ್ಟೀರಿಯ, ಸೂಕ್ಷ್ಮ ಜೀವಾಣುಗಳು, ನೊಣಗಳು ಮತ್ತು ಹೊರಗಿನ ಪದಾರ್ಥಗಳು ಹಸಿರು ಎಲೆ ತರಕಾರಿಗಳನ್ನು ನೀರಿನ ಮತ್ತು ಮಣ್ಣಿನ ಮೂಲಕ ಕಲುಷಿತಗೊಳಿಸುತ್ತವೆ. ಆದುದರಿಂದ ಹಸಿರು ಎಲೆ ತರಕಾರಿಗಳನ್ನು ಬಳಸುವ ಮೊದಲೇ ಸುರಿಯುವ ಅಥವಾ ಹರಿಯುವ ನೀರಿನಲ್ಲಿ ಸರಿಯಾಗಿ ತೊಳೆಯಬೇಕು. ಹಸಿರು ಎಲೆ ತರಕಾರಿಗಳನ್ನು ಹೆಚ್ಚಾಗಿ ಬೇಯಿಸಬಾರದು. ತರಕಾರಿಗಳನ್ನು ಬೇಯಿಸಿದಾಗ ಸಿಗುವ ನೀರನ್ನು ಬಿಸಾಡದೆ ಅದನ್ನು ಬಳಸಬೇಕು. ಹಸಿರು ಎಲೆ ತರಕಾರಿಗಳನ್ನು

ಹುರಿಯುವುದಾಗಲೀ ಬಿಸಿಲಿನಲ್ಲಿ ಒಣಗಿಸುವುದಾಗಲೀ ಮಾಡಬಾರದು. ಇದರಿಂದ ಅದರಲ್ಲಿನ ಕ್ಯುರೇಟಿನ್ ಅಂಶ ಕಳೆದು ಹೋಗುತ್ತದೆ. ಹಸಿರು ಎಲೆ ತರಕಾರಿಗಳನ್ನು ಕೈತೋಟಗಳಲ್ಲಿ ಬೆಳೆಸುವುದರಿಂದ ವರ್ಷದ ಎಲ್ಲಾ ದಿನಗಳಲ್ಲಿ ಸಿಗುತ್ತವೆ. ನುಗ್ಗೆ ಮತ್ತು ಅಗಾಥಿ ಇತ್ಯಾದಿ ಮರಗಳಿಂದ ಹಸಿರು ಎಲೆಗಳು ದಿನ ನಿತ್ಯ ಸಿಗುತ್ತವೆ. ಕೊತ್ತಂಬರಿ ಸೊಪ್ಪು, ದಂಟಿನ ಸೊಪ್ಪು, ಸಬಕ್ಕಿ ಸೊಪ್ಪು, ಮೆಂತ್ಯೆ ಸೊಪ್ಪು, ಹಾಗಲಕಾಯಿ, ಹೀರೆಕಾಯಿ, ಪಡವಲಕಾಯಿ, ಕುಂಬಳಕಾಯಿ, ಅಲಸಂಡೆ ಮತ್ತು ಸೊರೆಕಾಯಿ ಇತ್ಯಾದಿ ಸಸಿಗಳನ್ನು ಹಾಕಬಹುದು.

ಹಿಂದೆ ಕೇವಲ ಹೂ, ಹಸಿರು ಎಲೆ ತರಕಾರಿಗಳಿಗಷ್ಟೇ ಹಿತ್ತಲು ನೆಲೆಯಾಗದೆ, ಹಲವಾರು ಔಷಧಿ ಸಸ್ಯಗಳೂ ಅಲ್ಲಿ ಜಾಗ ಪಡೆದಿರುತ್ತಿದ್ದವು. ದಿನ ನಿತ್ಯದ ಅಡುಗೆಯಲ್ಲೂ ಬಳಕೆಯಾಗಿ ಮನೆಯ ಎಲ್ಲ ಜನರ ಸ್ವಾಸ್ಥ್ಯವನ್ನು ಸಂರಕ್ಷಿಸುವಲ್ಲಿ ಪ್ರಮುಖ ಪಾತ್ರ ವಹಿಸಿದ್ದವು. ಆದರೆ ಇಂದು ಅನೇಕ ಕಡೆ ಮುಖ್ಯವಾಗಿ ನಗರ ಪ್ರದೇಶಗಳಲ್ಲಿ ಔಷಧಿ ಸಸ್ಯಗಳನ್ನು ನೆಡುವುದಕ್ಕೆ ಜಾಗವೂ ಇಲ್ಲ ಜಾಗವಿದ್ದರೂ ಗಿಡ ನೆಟ್ಟು ಬೆಳೆಸುವ ವ್ಯವಧಾನ ಇಂದು ಯಾರಿಗೂ ಇಲ್ಲ. ಮುಖ್ಯವಾಗಿ ಹಿತ್ತಲ ಔಷಧಿಗಳಾಗಿ ತುಳಸಿ, ಪುದಿನ, ಲೋಳೆಸರ, ಒಂದೆಲಗ, ದೊಡ್ಡಪತ್ರೆ, ಗರಿಕೆ ಹುಲ್ಲು, ಲಿಂಬೆಗಿಡ, ಇತರ ಗಿಡ ಮೂಲಿಕೆಗಳನ್ನು ಬೆಳಸಿ ಬಳಸಿ ನಮ್ಮ ಆರೋಗ್ಯವನ್ನು ಕಾಪಾಡಿಕೊಳ್ಳಬಹುದು.

ಸ್ವಲ್ಪ ಜಾಗವಿದ್ದರೂ ಇದರ ಸರಿಯಾದ ಬಳಕೆಯನ್ನು ನೀವು ಮಾಡಬಹುದು. ನೀವು ಬಳ್ಳಿ ಗಿಡಗಳನ್ನು ನೆಟ್ಟು ಪೋಷಿಸಬಹುದು. ಇಂತಹ ಗಿಡಕ್ಕೆ ವಾರಕ್ಕೊಮ್ಮೆ ಹಾಕುವ ನೀರು ಸಾಕಾಗುತ್ತದೆ. ನೀವು ಕೈತೊಳೆಯುವ ನೀರನ್ನು ಸಂಗ್ರಹಿಸಿ ಕೈತೋಟದ ಕೃಷಿಗೆ ಬಳಸಬಹುದು. ಕೈತೋಟದ ಕೃಷಿಗೆ ಸಾವಯವ ಗೊಬ್ಬರವನ್ನು ಬಳಸುವುದು ಉತ್ತಮ.

ರಾಸಾಯನಿಕ ಕೀಟ ನಾಶಕಗಳನ್ನು ಬಳಸದೆ, ನಮ್ಮ ಹಿತ್ತಲಿನಲ್ಲಿಯೇ ಬೆಳೆಸಿದ, ಹಸಿರು ಎಲೆ ತರಕಾರಿಗಳು ದೀರ್ಘಕಾಲಿಕ ಆರೋಗ್ಯಕ್ಕೆ ಸಹಕಾರಿಯಾಗುತ್ತದೆ.

# ವಾರ್ತಾ ವಿಶೇಷ

ಶ್ರೀ. ಕ್ಲೆಮೆಂಟ್ ಫೆರ್ನಾಂಡಿಸ್ ಮತ್ತು ಶ್ರೀ ರಿಚರ್ಡ್ ಮಾರ್ಟಿಸ್

**ಮಹಿಳೆ ಮತ್ತು ಶಾಸನ ಬದ್ಧ ಹಕ್ಕುಗಳು**



ಇತ್ತೀಚಿನ ದಿನಗಳಲ್ಲಿ ಮಹಿಳೆಯರು ನಾನಾ ಕ್ಷೇತ್ರಗಳಲ್ಲಿ ಮುಂಚೂಣಿಗೆ ಬರುತ್ತಿದ್ದು ಸಮಾಜದಲ್ಲಿ ಇವರಿಗೆ ಆಗುತ್ತಿರುವ ಹಲವಾರು ಶೋಷಣೆಗಳ ವಿರುದ್ಧ ಹೋರಾಡಲು ಕಾನೂನಿನ ಅರಿವಾಗಬೇಕೆಂಬ ಉದ್ದೇಶದಿಂದ ಮಹಿಳೆ ಮತ್ತು ಕಾನೂನು ಈ ಕುರಿತಾಗಿ ದಿನಾಂಕ ಎಪ್ರಿಲ್ 13 ಮತ್ತು 14, 2016 ರಂದು ಎರಡು ದಿನಗಳ ಕಾರ್ಯಾಗಾರವನ್ನು ಕ್ರಾಸ್ ಸಂಸ್ಥೆಯಲ್ಲಿ ಏರ್ಪಡಿಸಲಾಗಿತ್ತು. ಈ ಕಾರ್ಯಾಗಾರದಲ್ಲಿ 70 ಮಂದಿ ಶಿಬಿರಾರ್ಥಿಗಳು ಪಾಲ್ಗೊಂಡಿದ್ದರು. ಈ ಕಾರ್ಯಾಗಾರಕ್ಕೆ ಸಿಸ್ಟರ್ ಜೂಲಿಯೆಟ್ ಕುಟಿನ್ಹ ಸಂಪನ್ಮೂಲ ವ್ಯಕ್ತಿಯಾಗಿ, ಯಾವ ಯಾವ ಅಪರಾಧಗಳಿಗೆ ಯಾವ ಯಾವ ಕಾನೂನಿನ್ವಯ ಕ್ರಮ ಜರುಗಿಸಬಹುದೆಂಬುದರ ಬಗ್ಗೆ ತಿಳುವಳಿಕೆ ನೀಡಿದರು.

**ಕ್ರಾಸ್ ಸಂಸ್ಥೆಯ ನಿರ್ದೇಶಕ ಮಂಡಳಿಯ ಸಭೆ**

ಕ್ರಾಸ್ ಸಂಸ್ಥೆಯ ನಿರ್ದೇಶಕ ಮಂಡಳಿಯ ಸಭೆಯು ಮೇ 19, 2016 ರಂದು ಕ್ರಾಸ್‌ನಲ್ಲಿ ಜರುಗಿತು. ಈ ಸಭೆಯ ಅಧ್ಯಕ್ಷತೆಯನ್ನು ಅತೀ ವಂದನೀಯ ಡಾ. ಜೆರಾಲ್ಡ್ ಐಸಾಕ್ ಲೋಬೋ, ಕ್ರಾಸ್ ಸಂಸ್ಥೆಯ ಅಧ್ಯಕ್ಷರು ಮತ್ತು ಉಡುಪಿ ಧರ್ಮ ಕ್ಷೇತ್ರದ ಧರ್ಮಾಧ್ಯಕ್ಷರು ವಹಿಸಿದರು. ಕ್ರಾಸ್ ಸಂಸ್ಥೆಯ ಉಪಾಧ್ಯಕ್ಷರು ಹಾಗೂ ಮೈಸೂರು ಧರ್ಮಕ್ಷೇತ್ರದ ಧರ್ಮಾಧ್ಯಕ್ಷರಾದ ಅತೀ ಪೂಜ್ಯನೀಯ ಡಾ. ತೋಮಸ್ ಆಂಟೋನಿ ವಾಜಪಿಳ್ಳಿ ಇವರು ಉಪಸ್ಥಿತರಿದ್ದರು. ಕ್ರಾಸ್ ಸಂಸ್ಥೆಯ ಅಧ್ಯಕ್ಷರು ಸಭೆಗೆ ಆಗಮಿಸಿದ ಎಲ್ಲಾ ಆಹ್ವಾನಿತರನ್ನು ಆತ್ಮೀಯವಾಗಿ ಸ್ವಾಗತಿಸಿ ಸಭೆಯನ್ನು ಕ್ರಮ ಬದ್ಧವಾಗಿ ನಿರ್ವಹಿಸಿದರು. ಫಾ ಸೆಬಾಸ್ಟಿಯನ್ ಫೆರ್ನಾಂಡಿಸ್‌ರವರು ಕ್ರಾಸ್ ಸಂಸ್ಥೆಯ ಕಾರ್ಯದರ್ಶಿಗಳಾಗಿ ನಿರ್ದೇಶಕ ಮಂಡಳಿಯ ಸಭೆಗೆ ಮಾಹಿತಿಯನ್ನು ನೀಡಿದರು.

**ಪರಿಣಾಮಕಾರಿ ಹಣಕಾಸು ನಿರ್ವಹಣೆ**



ವಿವಿಧ ಸಂಸ್ಥೆಗಳಲ್ಲಿ ಪರಿಣಾಮಕಾರಿ ಹಣಕಾಸು ನಿರ್ವಹಣೆ ಬಗ್ಗೆ ಮೇ 20,2016ರಂದು ಒಂದು ದಿನದ ಕಾರ್ಯಾಗಾರವನ್ನು ಕ್ರಾಸ್ ಸಂಸ್ಥೆಯಲ್ಲಿ ಏರ್ಪಡಿಸಲಾಗಿತ್ತು. ಈ ಕಾರ್ಯಾಗಾರಕ್ಕೆ

ಸಂಪನ್ಮೂಲ ವ್ಯಕ್ತಿಯಾಗಿ ಶ್ರೀ ವಿಠಲ್ ರಾವ್ ಲೊಕ್ರೆಟ್ ಇವರನ್ನು ಆಹ್ವಾನಿಸಲಾಗಿತ್ತು. ಜೂನ್ 2016 ರಿಂದ ಮಾರ್ಪಾಡು ಆಗಲಿರುವ ಹಣಕಸು ವ್ಯವಹಾರಗಳ ವಿಧೇಯಕಗಳ ಬಗ್ಗೆ ಮಾಹಿತಿ ನೀಡಿದರು. ಕರ್ನಾಟಕದ ವಿವಿಧ ಸಂಸ್ಥೆಗಳಿಂದ ಸುಮಾರು 40 ಮಂದಿ ಪ್ರತಿನಿಧಿಗಳು ಪಾಲ್ಗೊಂಡು ಶಿಬಿರದ ಲಾಭ ಪಡೆದರು.



**ಮಾಹಿತಿ ಹಕ್ಕಿನ ಬಗ್ಗೆ ಕಾರ್ಯಾಗಾರ**

ಮೇ 24, 2016 ರಂದು ಮಾಹಿತಿ ಹಕ್ಕಿನ ಬಗ್ಗೆ ಒಂದು ದಿನದ ಕಾರ್ಯಾಗಾರವನ್ನು ಕಲ್ಬುರ್ಗಿಯ ಸೇವಾ ಸಂಗಮ ಸಂಸ್ಥೆಯಲ್ಲಿ ಏರ್ಪಡಿಸಲಾಗಿತ್ತು. ಈ ಕಾರ್ಯಾಗಾರದ ಸಂಪನ್ಮೂಲ ವ್ಯಕ್ತಿಯಾಗಿ ಸಿಸ್ಟರ್ ಜೂಲಿಯೆಟ್ ಕುಟಿನ್ಹ ವಹಿಸಿದ್ದರು. ಇವರು ಮಾಹಿತಿ ಹಕ್ಕಿನ ಬಗ್ಗೆ ಸವಿವರವಾಗಿ, ಅದರ ಬಳಕೆಯ ಬಗ್ಗೆ ಮಾಹಿತಿ ನೀಡಿದರು. ಈ ಶಿಬಿರದಲ್ಲಿ 60 ಕ್ಕೂ ಹೆಚ್ಚು ಶಿಬಿರಾರ್ಥಿಗಳು ವಿವಿಧ ಇಲಾಖೆ ಮತ್ತು ಸಂಘ ಸಂಸ್ಥೆಗಳಿಂದ ಪಾಲ್ಗೊಂಡಿದ್ದರು.



**ಜಾಲಬಂಧ ಲಾಬಿ ಮತ್ತು ವಕಾಲತು ಕುರಿತ ಒಂದು ದಿನದ ರಾಜ್ಯ ಮಟ್ಟದ ಕಾರ್ಯಾಗಾರ**

ಈ ಕಾರ್ಯಾಗಾರವನ್ನು ಜೂನ್ 14, 2016 ರಂದು ಕ್ರಾಸ್ ಸಂಸ್ಥೆಯಲ್ಲಿ ಏರ್ಪಡಿಸಲಾಗಿತ್ತು. ಸಿಸ್ಟರ್ ಜೂಲಿಯೆಟ್ ಕುಟಿನ್ಹ ಅವರು, ಪರಸ್ಪರ ಒಗ್ಗಟ್ಟಿನಿಂದ ಕಾರ್ಯ ಸಾಧನೆ ಮತ್ತು ವಿವಿಧ ತಂತ್ರಗಾರಿಕೆಯ ಬಗ್ಗೆ ಮಾಹಿತಿ ನೀಡಿದರು. ಕ್ರಾಸ್ ಸಂಸ್ಥೆಯ ನಿರ್ದೇಶಕರಾದ ಫಾ. ಸೆಬಾಸ್ಟಿಯನ್ ಫೆರ್ನಾಂಡಿಸ್ ರವರು ಕಾರ್ಯಾಗಾರವನ್ನು ಉದ್ದೇಶಿಸಿ ಮಾತನಾಡುತ್ತಾ ಸಮುದಾಯಗಳ ಒಕ್ಕೂಟ ಎಷ್ಟು ಮುಖ್ಯ ಎಂಬುದನ್ನು ವಿವರಿಸಿದರು.

**ಸಾಮಾಜಿಕ ಅಭಿವೃದ್ಧಿಗೆ ಹಕ್ಕು ಆಧಾರಿತ ಸಮೀಪನ**

ಸಾಮಾಜಿಕ ಅಭಿವೃದ್ಧಿಗೆ ಹಕ್ಕು ಆಧಾರಿತ ಸಮೀಪನ ಎಂಬ ಒಂದು ದಿನದ ಕಾರ್ಯಾಗಾರವನ್ನು ಜೂನ್ 15, 2016 ರಂದು ಕ್ರಾಸ್ ಸಂಸ್ಥೆಯಲ್ಲಿ ಏರ್ಪಡಿಸಲಾಗಿತ್ತು. ಸಂಪನ್ಮೂಲ ವ್ಯಕ್ತಿಗಳು ವಿವಿಧ ಸಮುದಾಯಗಳ ಅಭಿವೃದ್ಧಿಗೆ ಹಕ್ಕು ಆಧಾರಿತ ಹೋರಾಟ ಎಷ್ಟು ಮುಖ್ಯ ಮತ್ತು ಪರಿಣಾಮಕಾರಿ ಎಂಬುದರ ಕುರಿತು ಉದಾಹರಣೆಯ ಮೂಲಕ ವಿವರಿಸಿದರು. ಮಾನವ ಹಕ್ಕು ಮತ್ತು ಮೂಲಭೂತ ಹಕ್ಕುಗಳ ಬಗ್ಗೆ ಪಾರದರ್ಶಕತೆಯ ಪ್ರಾಮುಖ್ಯತೆಯನ್ನು ತಿಳಿಸಿದರು. ಕ್ರಾಸ್ ಸಂಸ್ಥೆಯ ನಿರ್ದೇಶಕರಾದ ಫಾ. ಸೆಬಾಸ್ಟಿಯನ್ ಫೆರ್ನಾಂಡಿಸ್‌ರವರು ಕಾರ್ಯಾಗಾರವನ್ನು ಉದ್ದೇಶಿಸಿ ಮಾತನಾಡುತ್ತಾ ಹಕ್ಕು ಉಳ್ಳವರು ಮತ್ತು ಕಾರ್ಯ ನಿರ್ವಹಿಸುವವರ ಮಧ್ಯದ ಗೊಂದಲಮಯ ಪರಿಸ್ಥಿತಿಯ ಸುಧಾರಣೆಗೆ ಹಕ್ಕು ಆಧಾರಿತ ನಡವಳಿಯ ಬಗ್ಗೆ ವಿವರಿಸಿದರು.

**ಮಹಿಳಾ ಸಬಲೀಕರಣ ಯೋಜನೆಯ ಪ್ರಗತಿ ಪುನರವಲೋಕನಾ ಕಾರ್ಯಕ್ರಮ**



ಮಹಿಳಾ ಸಬಲೀಕರಣ ಯೋಜನೆಯ ಪ್ರಗತಿ ಪುನರವಲೋಕನಾ ಕಾರ್ಯಕ್ರಮವನ್ನು ದಿನಾಂಕ, ಜೂನ್ 15 ಮತ್ತು 16 2016 ರಂದು ರಂದು ಕ್ರಾಸ್ ಸಂಸ್ಥೆಯಲ್ಲಿ ಏರ್ಪಡಿಸಲಾಗಿತ್ತು. 14 ಪಾಲುದಾರ ಸಂಸ್ಥೆಗಳ ಪ್ರತಿನಿಧಿಗಳು ಭಾಗವಹಿಸಿ ತಮ್ಮ ವರದಿಯನ್ನು ಮಂಡಿಸಿದರು. ಸಿಸ್ಟರ್ ನ್ಯಾನ್ಸಿ ಲೋಭೊ ರವರು ಸಭೆಯನ್ನು ಉದ್ದೇಶಿಸಿ ಮಾತನಾಡುತ್ತಾ ಎಲ್ಲಿಯವರೆಗೆ ಮಹಿಳೆಯರ ಸಬಲೀಕರಣ ಆಗುವುದಿಲ್ಲವೋ ಅಲ್ಲಿ ತನಕ ಅವರ ಏಳಿಗೆ ಆಗುವುದಿಲ್ಲ ಎಂದರು. ಸಿಸ್ಟರು ಜೀತಾರವರು ಕಾರ್ಯಾಗಾರದಲ್ಲಿ ತಾಂತ್ರಿಕ ಸಲಹೆಗಾರರಾಗಿ ಉಪಸ್ಥಿತರಿದ್ದರು. ಕ್ರಾಸ್ ಸಂಸ್ಥೆಯ ನಿರ್ದೇಶಕರಾದ ಫಾ. ಸೆಬಾಸ್ಟಿಯನ್ ಫೆರ್ನಾಂಡಿಸ್‌ರವರು ಕಾರ್ಯಾಗಾರವನ್ನು ಉದ್ದೇಶಿಸಿ ಮಾತನಾಡುತ್ತಾ ಮಹಿಳೆಯರ ಸಬಲೀಕರಣ ತಮ್ಮ ಮನೆಯಿಂದಲೇ ಪ್ರಾರಂಭವಾಗಬೇಕು, ಇದಕ್ಕಾಗಿ ಅವರು ವಿದ್ಯಾವಂತರಾಗಬೇಕು ಎಂದು ನುಡಿದರು.

MISEREOR
IHR HILFSWERK

ಪ್ರತಿಗಳಿಗಾಗಿ ಸಂಪರ್ಕಿಸಿ :

**ಕರ್ನಾಟಕ ರೀಜನಲ್ ಆರ್ಗನೈಝೇಷನ್ ಫಾರ್ ಸೋಶಿಯಲ್ ಸರ್ವೀಸ್ (ಕ್ರಾಸ್)**

ಅಂಚೆ ಪೆಟ್ಟಿಗೆ – 8427 ನಂ. 58/6 , 2ನೇ ಅಡ್ಡ ರಸ್ತೆ, ಡಕೋಸ್ಟ ಲೇಔಟ್, ವೀಲರ್ ರೋಡ್ ಬಡಾವಣೆ,
ಬೆಂಗಳೂರು 560084. ದೂರವಾಣಿ ಸಂಖ್ಯೆ : 080– 25496812/13, ಇ–ಮೇಲ್ : krossdir@gmail.com
ವೆಬ್‌ಸೈಟ್ : www.krossbangalore.com